ದಿನಾಂಕ 22-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**<u>ಪಾಟಿಸವಾಲುಃ 2 ನೇ ಎದುರುದಾರರ ಪರ ಶ್ರೀ ಎ.ಎಸ್.ಹೆಚ್ ವಕೀಲರಿಂದಃ</u>**

1) ತಾರೀಕು 25-05-2023 ರಂದು ನಾನು ಪರಿಹಾರದ ಆದೇಶದ ಪ್ರತಿಯನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ಸದರಿ ಪರಿಹಾರದ ತೀರ್ಪಿನ ಬಗ್ಗೆ ತಿಳಿದ ನಂತರವೇ ನಾನು ತಾರೀಕು 01-06-2024 ರಂದು ನನಗೆ ಈಗ ತೋರಿಸಿದ ತಕರಾರನ್ನು ಹಾಕಿದ್ದೇನೆ ಎಂದರೆ, ಹಾಕಿರುವುದು ನಿಜ, ಆದೇಶ ತಿಳಿದು ಹಾಕಿಲ್ಲ. ಅದನ್ನು **ನಿಶಾನೆ ಆರ್-1** ಎಂದು ಗುರುತಿಸಿದೆ. ಅದಕ್ಕಿಂತ ಮೊದಲು ನಾನು ಯಾವುದೇ ತಕರಾರನ್ನು ಪರಿಹಾರದ ಆದೇಶಕ್ಕೆ ಸಂಬಂಧಪಟ್ಟಂತೆ ನೀಡಿಲ್ಲ ಎಂದರೆ ಸರಿ. ನಾನು ನಿಶಾನೆ ಆರ್-1 ರ ಅರ್ಜಿಯನ್ನು ನಿಗದಿತ ಅವದಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

2) ನಿಶಾನೆ ಪಿ-5 ತಾರೀಕು 02-06-2023 ರ ಖರೀದಿ ಪತ್ರ ಪರಿಹಾರದ ಆದೇಶದ ನಂತರ ಆದ ಆದ ಖರೀದಿ ಪತ್ರ ಎಂದರೆ ಇರಬಹುದು. ನನಗೆ ಐತೀರ್ಪು (ಪರಿಹಾರದ ಆದೇಶ) ದೊರೆತಿಲ್ಲ ಎಂಬುದಕ್ಕಾಗಿ ಸ್ವಾದೀನ ಅಧಿಕಾರಿಯಾಗಲೀ, 2 ನೇ ಎದುದಾರರಿಗಾಗಲೀ ಪತ್ರ /ಮನವಿ ಬರೆದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಬರೆದ ಪತ್ರಗಳ ಪ್ರತಿಯಾಗಲೀ, ಅವುಗಳನ್ನು ಎದುರುದಾರರು ಪಡೆದ ಸ್ವೀಕೃತಿ ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಹಾಜರುಪಡಿಸಬಲ್ಲೆ. ನಾನು ಪರಿಹಾರದ ತೀರ್ಪಿಗೆ ಸಂಬಂಧಪಟ್ಟಂತೆ ಯಾವುದೆ ಮನವಿಯಾಗಲೀ ,ತಕರಾರು ಆಗಲೀ ಎದುರುದಾರರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

3) ನಿಶಾನೆ ಪಿ-5 ರ ಸ್ವತ್ತಿಗೂ, ಸ್ವಾಧೀನವಾಗಿದ್ದ ನಮ್ಮ ಸ್ವತ್ತಿಗೂ ಯಾವುದೇ ಸಾಮ್ಯತೆ ಇಲ್ಲ ಎಂದರೆ ಸರಿಯಲ್ಲ. ಅವು ಒಂದೇ ಗ್ರಾಮದ ಜಮೀನುಗಳು. ಸದರಿ ಜಮೀನುಗಳ ನಡುವೆ ಅಂತರ ಸುಮಾರು 300 ರಿಂದ 400 ಮೀಟರ್. ನಿಪಿ-5 ರ

ಸ್ವತ್ತು ಮತ್ತು ಸ್ವಾಧೀನವಾಗಿದ್ದ ಸ್ವತ್ತುಗಳು 300 ರಿಂದ 400 ಮೀಟರ್ ಗಿಂತ ಹೆಚ್ಚಿನ ಅಂತರದಲ್ಲಿ ಇದೆ ಎಂದರೆ ಸರಿಯಲ್ಲ. ನಿಪಿ-5 ರ ಸ್ವತ್ತು ಮತ್ತು ಸ್ವಾಧೀನವಾಗಿದ್ದ ನಮ್ಮ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಫೀಲ್ಡ್ ಮೆಸರ್ಮೆಂಟ್ ಬುಕ್ ನ್ನು ಹಾಜರುಪಡಿಸಬಹುದು. ಬಿಲ್ಲಾಡಿ ಗ್ರಾಮದ ಜಮೀನಿನ ಸ್ವತ್ತುಗಳ ಸ್ವಾದೀನವಾದಗಿನಿಂದ ಹಿಂದಿನ 3 ವರ್ಷಗಳ ಗರಿಷ್ಟ ದರದಲ್ಲಿ ಮಾರಾಟವಾದ ಅಂಕಿ ಸಂಖ್ಯೆಗಳನ್ನು ಪರಿಗಣಿಸಿ ಸೂಕ್ತವಾದ ಮೌಲ್ಯವನ್ನು ಪರಿಗಣಿಸಿ, ಸ್ವಾಧೀನವಾದಜಮೀನುಗಳಿಗೆ ಹೆಚ್ಚಿನ ಮೌಲ್ಯವನ್ನು ಕೊಟ್ಟು ಪರಿಹಾರ ನೀಡಿದ್ದಾರೆ ಎಂದರೆ ಸರಿಯಲ್ಲ. ಜಮೀನು ಸ್ವಾದೀನವಾಗಿದ್ದ ಸಮಯದಲ್ಲಿ ಪರಿಹಾರದ ಮೌಲ್ಯ ಇದ್ದ ಹೆಚ್ಚಿನ ದರದಲ್ಲಿ ನೊಂದಣಿಯಾಗಿದ್ದ ಖರೀದಿ ಕಾಗದಗಳು ಇಲ್ಲ. ಎದುರುದಾರರು ಸ್ವಾದೀನವಾಗಿದ್ದ ಜಮೀನುಗಳಿಗೆ ಸರಿಯಾದ ಪರಿಹಾರದ ಹಣವನ್ನು ನಿಗದಿಗೊಳಿಸಿದ್ದಾರೆ ಎಂದರೆ ಸರಿಯಲ್ಲ.

4) ಈಗಾಗಲೇ ನಾನು ಪರಿಹಾರದ ಹಣ ಸುಮಾರು 42,20,000.00 ಗಳನ್ನು ಪಡೆದಿದ್ದೇನೆ. ಆ ಪರಿಹಾರದ ಪಡೆದಿದ್ದಕ್ಕಾಗಿ ನಾನು ಯಾವುದೇ ತಕಾರಾರು ಮಾಡಿಲ್ಲ ಎಂದರೆ ನಿಜ. ನಾನು ಸ್ವಾದೀನವಾಗಿದ್ದ ಜಮೀನುಗಳಿಗೆ ಪರಿಹಾರ ಪಡೆಯುವ ಸಮಯದಲ್ಲಿ ಯಾವುದೇ ತಕರಾರು ಮಾಡದೇ ಈಗ ಪರಿಹಾರ ಸೂಕ್ತವಾಗಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರ ದಾಖಲೆಯನ್ನು ಹೆಚ್ಚಿನ ಪರಿಹಾರ ಪಡೆಯಲು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ಕೇಳಿರುವ ಹೆಚ್ಚಿನ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಮಾಡಿ, ಹೆಚ್ಚಿನ ಪರಿಹಾರಕ್ಕಾಗಿ ಮಾಡಿಕೊಂಡ ಈ ಅರ್ಜಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿಸವಾಲುಃ 1 ನೇ ಎದುರುದಾರರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುತ್ತಾರೆ</u>**

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ನ್ಯಾಯಾಧೀಶರು
ಜಿಲ್ಲಾ ನ್ಯಾಯಾಲಯ,ಉಡುಪಿ